ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 24 ಚಾ ಸಾ 42

ಹೆಸರುಃ ಮಾನ್ ಸಿಂಗ್

ತಂದೆಯ ಹೆಸರುಃ ಬಲರಾಮು

ವಯಸ್ಸುಃ 36 ವರ್ಷ

ಉದ್ಯೋಗಃ ಬಟ್ಟೆ ಮತ್ತು ಹೂವಿನ ವ್ಯಾಪಾರ

ವಾಸಃ ಕೆ ಆರ್ ಸಾಗರ

ದಿಃ 06.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇದ್ದೇನೆ. ಗಂಗಾರಾಮುರವರು ಕೂಡ ತನ್ನ ಕುಟುಂಬದ ಜೊತೆಯಲ್ಲಿ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇದ್ದರು .

2. ಸದರಿ ಗಂಗಾರಾಮುವಿನ ಹೆಂಡತಿಯ ಹೆಸರು ಲಕ್ಷ್ಮಿ ಅವರಿಗೆ ಮೂರು ಜನ ಮಕ್ಕಳು. ಅವರೆಂದರೆ

ಕೋಮಲ್, ಕುನಾಲ್ ಮತ್ತು ರಾಜ್. ಗೋವಿಂದ ಗಂಗಾರಾಮುವಿನ ಅಣ್ಣನ ಮಗ. ಅವರೆಲ್ಲರೂ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇದ್ದರು.

3. ಗಂಗಾರಾಮು ಊರಿನಿಂದ ಹೊರಗೆ ಹೋಗಿ ಬಟ್ಟೆ ಮತ್ತು ಪ್ಲಾಸ್ಟಿಕ್ ಹೂವಿನ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ.

4. ಸುಮಾರು 2 ವರುಷದ ಹಿಂದೆ ಗಂಗಾರಾಮು ಕೆಲಸದ ನಿಮಿತ್ತ ಹೊರಗೆ ಹೋಗಿದ್ದ . ಆತನ ಮನೆಯಲ್ಲಿ ಆತನ ಹೆಂಡತಿ , ಮೂರು ಜನ ಮಕ್ಕಳು ಮತ್ತು ಗೋವಿಂದ ಇದ್ದರು .

5. ಸುಮಾರು 2 ವರುಷದ ಹಿಂದೆ ಬೆಳಗ್ಗೆ 11.30 ಗಂಟೆಗೆ ನಾನು ಮನೆಯಲ್ಲಿದ್ದಾಗ ಗಂಗಾರಾಮುವಿನ ಹೆಂಡತಿ ಲಕ್ಷ್ಮಿ, ಆಕೆಯ ಮೂರು ಜನ ಮಕ್ಕಳು ಮತ್ತು ಗಂಗಾರಾಮುವಿನ ಅಣ್ಣನ ಮಗ ಗೋವಿಂದನನ್ನು ಯಾರೋ ಕೊಲೆ ಮಾಡಿದ್ದಾರೆ ಎಂಬ ವಿಚಾರ ತಿಳಿಯಿತು.

6. ಆ ರೀತಿ ವಿಚಾರ ತಿಳಿದ ನಾನು ಬಜಾರ್ ಲೈನ್ ನಲ್ಲಿರುವ ಗಂಗಾರಾಮುವಿನ ಮನೆಗೆ ಹೋಗಿ ನೋಡಿದಾಗ ಅಲ್ಲಿ ಲಕ್ಷ್ಮಿ , ಆಕೆಯ ಮೂರು ಜನ ಮಕ್ಕಳು ಮತ್ತು ಗೋವಿಂದನನ್ನು ಕೊಲೆ ಮಾಡಲಾಗಿತ್ತು.

7. ಆನಂತರ ಐದೂ ಶವಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕಳುಹಿಸಿ ಕೊಟ್ಟರು. ನಾನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋಗಿ ನೋಡಿದಾಗ ಅಲ್ಲಿಗೆ ಪೊಲೀಸರು ಮತ್ತು ಇನ್ಸ್ ಪೆಕ್ಟರ್ ಬಂದಿದ್ದರು. ಅಲ್ಲಿ ನಾನು ಆಸ್ಪತ್ರೆಯ ಶವಾಗಾರದಲ್ಲಿ ಕುನಾಲ್‌ನ ಶವವನ್ನು ನೋಡಿರುತ್ತೇನೆ.

8. ನಾನು ನೋಡಿದಾಗ ಕುನಾಲ್‌ನ ಬಾಯಿ , ತಲೆ, ಮುಖ ಒಟ್ಟು ಈಗೆ ಸೇರಿ ಆತನ ಶವದಲ್ಲಿ 3-4 ಗಾಯಗಳಿದ್ದವು. ಆ ಗಾಯಗಳನ್ನು ನೋಡಿದಾಗ ಯಾರೋ ಆತನನ್ನು ಹೊಡೆದು ಸಾಯಿಸಿದ ರೀತಿಯಲ್ಲಿ ಕಂಡುಬರುತ್ತಿತ್ತು.

9. ಆ ಶವವನ್ನು ನೋಡಿಕೊಂಡು ಪೊಲೀಸರು ಬರವಣಿಗೆ ಮಾಡಿದ್ದಾರೆ. ಆ ಬರವಣಿಗೆಯನ್ನು ಈಗ

ನೋಡಿದೆ. ಸಾಕ್ಷಿ ಗುರುತಿಸಿದ ದಾಖಲೆಯನ್ನು ಈಗಾಗಲೇ ನಿಪಿ 35 ಎಂದು ಗುರುತಿಸಲಾಗಿದೆ. ಆ ರೀತಿ ಶವ ಪಂಚನಾಮೆ ಮಾಡುವಾಗ ನನ್ನನ್ನು ವಿಚಾರಣೆ ಮಾಡಿದ್ದಾರೆ ಮತ್ತು ನಾನು ಹೇಳಿಕೆ ಕೊಟ್ಟಿರುತ್ತೇನೆ.

10. ಆ ಶವಕ್ಕೆ ಸಂಬಂಧಪಟ್ಟಂತೆ ನಿಪಿ 36 ರಂತೆ ಎರಡು ಫೊಟೋಗಳನ್ನು ತೆಗೆಯಲಾಗಿದೆ .

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಎಸ್ ಆರ್ ಎಸ್ ವಕೀಲರಿಂದಃ

11. ಶವ ಪಂಚನಾಮೆಗೆ ಸಾಕ್ಷಿದಾರರಾಗಿ ಬರಬೇಕು ಎಂದು ಪೊಲೀಸರು ನನಗೆ ನೋಟಿಸ್ ಕೊಟ್ಟಿಲ್ಲ.

12. ಶವ ಪಂಚನಾಮೆ ಮಾಡುವ ಕಾಲದಲ್ಲಿ ನಾನು ಕೆ ಆರ್ ಆಸ್ಪತ್ರೆಯ ಶವಾಗಾರದ ಬಳಿ ಇದ್ದೆ. ಪೊಲೀಸರು ಶವ ಪಂಚನಾಮೆ ಮಾಡುವಾಗ ಸಮಯ ಎಷ್ಟಾಗಿತ್ತೆಂಬುದು ನನಗೆ ನೆನಪಿಲ್ಲ.

13. ಪೊಲೀಸರು ಏನು ಬರೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

14. ನಾನು ಶವಾಗಾರಕ್ಕೆ ಹೋಗಿಲ್ಲ ಮತ್ತು ನನ್ನ

ಸಮಕ್ಷಮದಲ್ಲಿ ಪೊಲೀಸರು ಮಹಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)